# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2022-23ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ಗ್ರೂಪ್-ಬಿ, ಸಿ ಮತ್ತು ಡಿ ವೃಂದದ ನೌಕರರ ವರ್ಗಾವಣೆಗಳನ್ನು ಪ್ರಾರಂಭಿಕವಾಗಿ (On pilot basis) ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ.

**ಓದಲಾಗಿದೆ:**
1. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕ ಕಡತದ ಸಂಖ್ಯೆ:BCWD-11049/2/2022-BCWD_ADMIN-BCWD, ದಿನಾಂಕ:19.04.2022
2. ಸರ್ಕಾರದ ಸುತ್ತೋಲೆ ಸಂಖ್ಯೆ:ಹಿಂವಕ 107 ಬಿಇಟಿ 2021 ದಿನಾಂಕ:05-02-2022.
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 16 ಸೇನೌವ 2022, ದಿನಾಂಕ:30.04.2022

******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಕಡತದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಗ್ರಾಮೀಣ ಪ್ರದೇಶದಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರದಿಂದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ. ಸದರಿ ವಿದ್ಯಾರ್ಥಿನಿಲಯಗಳಲ್ಲಿ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ತಮ್ಮ ಕರ್ತವ್ಯಗಳನ್ನು ಪ್ರೇರಣಾತ್ಮಕವಾಗಿ ಹಾಗೂ ಉತ್ತಮ ರೀತಿಯಲ್ಲಿ ನಿರ್ವಹಿಸಲು ಸಿಬ್ಬಂದಿಗಳ ವರ್ಗಾವಣೆಯನ್ನು ಪಾರದರ್ಶಕವಾಗಿ ಮಾಡಬೇಕಾಗಿರುತ್ತದೆ ಮತ್ತು ಗ್ರೂಪ್ ಬಿ, ಸಿ ಮತ್ತು ಡಿ ವೃಂದದ ಖಾಯಂ ಸಿಬ್ಬಂದಿಗಳ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ಮಾಡುವುದು ಅವಶ್ಯವಿರುತ್ತದೆ ಎಂದು ಆಯುಕ್ತರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸುತ್ತೋಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸಂಖ್ಯಾಬಲದ ಆಧಾರದ ಮೇಲೆ ಗ್ರೂಪ್-ಡಿ ವೃಂದದ ನೌಕರರು ಅತಿದೊಡ್ಡ ವೃಂದವಾಗಿರುತ್ತದೆ. ಸದರಿ ವೃಂದದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನೌಕರರ ಹಿತಕ್ಕಾಗಿ ಹಾಗೂ ಪಾರದರ್ಶಕ ವೃಂದ ನಿರ್ವಹಣೆಗಾಗಿ ವಿದ್ಯಾರ್ಥಿನಿಲಯಗಳ ಗ್ರೂಪ್-ಡಿ ನೌಕರರಾದ ಅಡುಗೆಯವರು, ಅಡುಗೆ ಸಹಾಯಕರು ಹಾಗೂ ರಾತ್ರಿ ಕಾವಲುಗಾರರ ವರ್ಗಾವಣೆಯನ್ನು ಖಾಲಿ ಹುದ್ದೆಗಳ ವಿವರ ಹಾಗೂ ಜೇಷ್ಠತೆಯನ್ನು ಅನುಸರಿಸಿ ಪಾರದರ್ಶಕ ಕೌನ್ಸಿಲಿಂಗ್ ಪದ್ಧತಿಯ ಮುಖಾಂತರ ಸಾಮಾನ್ಯ ವರ್ಗಾವಣೆ ಸಮಯದಲ್ಲಿ ಸಂಬಂಧಿಸಿದ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್‌ರವರ ಹಂತದಲ್ಲಿಯೇ ಕೌನ್ಸಿಲಿಂಗ್ ಮುಖಾಂತರ ವರ್ಗಾವಣೆ ಮಾಡಲು ವಿವರವಾದ ಆದೇಶವನ್ನು ಹೊರಡಿಸಲಾಗುವುದೆಂದು ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ 2022-23ನೇ ಸಾಲಿನಲ್ಲಿ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಯ ಮಾರ್ಗಸೂಚಿಗಳನ್ನು ಹಾಗೂ ವೇಳಪಟ್ಟಿಯನ್ನು ಹೊರಡಿಸಲಾಗಿರುತ್ತದೆ.

...2

ಮುಂದುವರೆದು, ಗ್ರೂಪ್-ಬಿ, ಗ್ರೂಪ್-ಸಿ ವೃಂದಗಳ ಸಿಬ್ಬಂದಿಗಳನ್ನು ವರ್ಗಾವಣೆಗಳನ್ನು ಪಾರದರ್ಶಕವಾಗಿ ಕೌನ್ಸಿಲಿಂಗ್ ಮುಖಾಂತರ ಆಯುಕ್ತರ ಹಂತದಲ್ಲಿ ಮಾಡಲು ಹಾಗೂ ಗ್ರೂಪ್-ಡಿ ವೃಂದಗಳ ಸಿಬ್ಬಂದಿಗಳ ವರ್ಗಾವಣೆಗಳನ್ನು ಪಾರದರ್ಶಕವಾಗಿ ಕೌನ್ಸಿಲಿಂಗ್ ಮುಖಾಂತರ ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ಮಾಡಲು ತೀರ್ಮಾನಿಲಾಗಿದೆ.

ಮೇಲಿನ ಎಲ್ಲಾ ಉಲ್ಲೇಖಗಳನ್ನು ಪರಿಶೀಲಿಸಿ, ವಿಸ್ತೃತವಾಗಿ ಅವಲೋಕಿಸಿ ಅದರಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಹಿಂವಕ 117 ಬಿಇಟಿ 2022, ಬೆಂಗಳೂರು, ದಿನಾಂಕ: 07.05 2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಗ್ರೂಪ್-ಬಿ ಮತ್ತು-ಸಿ ವೃಂದಗಳ ಸಿಬ್ಬಂದಿಗಳ ವರ್ಗಾವಣೆಯನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯವರ ಹಂತದಲ್ಲಿ ಹಾಗೂ ಗ್ರೂಪ್-ಡಿ ವೃಂದಗಳ ಸಿಬ್ಬಂದಿಗಳ ವರ್ಗಾವಣೆಗಳನ್ನು ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಸೇನೌವ 2022, ದಿನಾಂಕ:30.04.2022 ರಲ್ಲಿ ತಿಳಿಸಿರುವಂತೆ ಒಂದು ಜೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ.6 ನ್ನು ಮೀರದಂತೆ ದಿನಾಂಕ:15.06.2022ರೊಳಗೆ ಸಾರ್ವತ್ರಿಕ ವರ್ಗಾವಣೆಯನ್ನು ಪ್ರಾರಂಭಿಕವಾಗಿ ಕೌನ್ಸಿಲಿಂಗ್ ಮೂಲಕ ಕೈಗೊಳ್ಳಲು ಈ ಕೆಳಕಂಡ ಷರತ್ತು ನಿಬಂಧನೆಗಳಿಗೊಳಪಟ್ಟು ಅನುಮೋದಿಸಲಾಗಿದೆ.

1. **ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯವರು ಅನುಸರಿಸಬೇಕಾಗಿರುವ ನಿಬಂಧನೆಗಳು**:-
   i. ವೃಂದವಾರು ಖಾಲಿ ಇರುವ ಗ್ರೂಪ್ ಬಿ ಮತ್ತು ಸಿ ವೃಂದಗಳ ಹುದ್ದೆಗಳ ವಿವರಗಳನ್ನು ಆಯುಕ್ತಾಲಯದ ಅಧಿಕೃತ ಜಾಲಾತಾಣದಲ್ಲಿ ದಿನಾಂಕ:15.05.2022 ರೊಳಗೆ ಪ್ರಕಟಿಸುವುದು.
   ii. ವರ್ಗಾವಣೆ ಕೋರಿಕೆ ಸಲ್ಲಿಸಲು ದಿನಾಂಕ:31.05.2022 ರವರೆಗೆ ಅವಕಾಶ ಕಲ್ಪಿಸುವುದು ಹಾಗೂ ಕೋರಿಕೆ ಸಲ್ಲಿಸುವ ವಿಧಾನವನ್ನು (ಇ-ಮೇಲ್/ಪತ್ರ) ನಿಗಧಿಪಡಿಸಿ ಆಯುಕ್ತರು ಸದರಿ ಎರಡು ವೃಂದಗಳ ಎಲ್ಲಾ ಸಿಬ್ಬಂದಿಯ ಗಮನಕ್ಕೆ ಬರುವಂತೆ ಸುತ್ತೋಲೆಯನ್ನು ಹೊರಡಿಸುವುದು.
   iii. ಇದುವರೆವಿಗೂ ಸ್ವೀಕೃತವಾಗಿರುವ ಹಾಗೂ ಇನ್ನು ಮುಂದೆ ಸ್ವೀಕೃತವಾಗುವ ಎಲ್ಲಾ ಮನವಿಗಳು, ಟಿಪ್ಪಣಿಗಳು ಮತ್ತು ಕೋರಿಕೆಗಳನ್ನು ಕ್ರೂಢೀಕರಿಸಿ ಜೇಷ್ಠಾತೆಯನುಸಾರ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಸೇನೌವ 2013, ದಿನಾಂಕ:07.06.2013 ರಲ್ಲಿರುವ ಮಾರ್ಗಸೂಚಿಗಳಂತೆ ವೃಂದವಾರು ವರ್ಗಾವಣೆ ಜೇಷ್ಠಾತ ಪಟ್ಟಿಯನ್ನು ತಯಾರಿಸಿ ಹಾಗೂ ಅದರಲ್ಲಿ ಒಂದು ಜೇಷ್ಠಾತ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ. 6 ನ್ನು ಮೀರದಂತೆ ಕರಡು ವರ್ಗಾವಣೆ ಜೇಷ್ಠಾತ ಪಟ್ಟಿಯನ್ನು ದಿನಾಂಕ:04.06.2022 ರಂದು ಆಯುಕ್ತಾಲಯದ ಅಧಿಕೃತ ಜಾಲಾತಾಣದಲ್ಲಿ ಪ್ರಕಟಿಸುವುದು.

...3

iv. ಸದರಿ ಕರಡು ವರ್ಗಾವಣೆ ಜೇಷ್ಠಾತ ಪಟ್ಟಿಯ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ:08.06.2022 ರವರೆಗೆ ಅವಕಾಶ ನೀಡುವುದು. ಆಕ್ಷೇಪಣೆಗಳನ್ನು ಇತ್ಯಾರ್ಥಪಡಿಸಿ ಅಂತಿಮ ವರ್ಗಾವಣೆ ಜೇಷ್ಠಾತ ಪಟ್ಟಿಯನ್ನು ದಿನಾಂಕ:10.06.2022ರಲ್ಲಿ ಆಯುಕ್ತಾಲಯದ ಅಧಿಕೃತ ಜಾಲಾತಾಣದಲ್ಲಿ ಪ್ರಕಟಿಸುವುದು.

v. ದಿನಾಂಕ:13.06.2022ರಂದು ಶೇ. 6 ರಂತೆ ಸಂಖ್ಯೆ ನಿಗಧಿಗೊಳಿಸಿರುವ ಅಂತಿಮ ವರ್ಗಾವಣೆ ಜೇಷ್ಠಾತ ಪಟ್ಟಿಯಂತೆ ಅರ್ಹವಿರುವ ಸಿಬ್ಬಂದಿಗಳನ್ನು ಪಾರದರ್ಶಕ ಹುದ್ದೆ ಆಯ್ಕೆಗಾಗಿ ಕೌನ್ಸಿಲಿಂಗ್ ಮೂಲಕ ಹುದ್ದೆ ನಿಗದಿಗೊಳಿಸಿ ಸ್ಥಳದಲ್ಲಿಯೇ ವರ್ಗಾವಣೆ ಆದೇಶ ಹೊರಡಿಸುವುದ

2. **ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಸರಿಸಬೇಕಾಗಿರುವ ನಿಬಂಧನೆಗಳು:**

i. ಸಂಬಂಧಿತ ಜಿಲ್ಲೆಯಲ್ಲಿ ಗ್ರೂಪ್-ಡಿ ವೃಂದದ ಖಾಲಿ ಇರುವ ಹುದ್ದೆಗಳ ವಿವರಗಳನ್ನು ವೃಂದವಾರು ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಯ ಅಧಿಕೃತ ಜಾಲಾತಾಣದಲ್ಲಿ ದಿನಾಂಕ:15.05.2022 ರೊಳಗೆ ಪ್ರಕಟಿಸುವುದು.

ii. ವರ್ಗಾವಣೆ ಕೋರಿಕೆ ಸಲ್ಲಿಸಲು ದಿನಾಂಕ:31.05.2022 ರವರೆಗೆ ಅವಕಾಶ ಕಲ್ಪಿಸುವುದು ಹಾಗೂ ಕೋರಿಕೆ ಸಲ್ಲಿಸುವ ವಿಧಾನವನ್ನು (ಇ-ಮೇಲ್/ಪತ್ರ) ನಿಗಧಿಪಡಿಸಿ ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸದರಿ ವೃಂದದ ಎಲ್ಲ ಸಿಬ್ಬಂದಿಯ ಗಮನಕ್ಕೆ ಬರುವಂತೆ ಸುತ್ತೋಲೆಯನ್ನು ಹೊರಡಿಸುವುದು.

iii. ಇದುವರೆವಿಗೂ ಸ್ವೀಕೃತವಾಗಿರುವ ಹಾಗೂ ಇನ್ನು ಮುಂದೆ ಸ್ವೀಕೃತವಾಗುವ ಎಲ್ಲಾ ಮನವಿಗಳು, ಟಿಪ್ಪಣಿಗಳು ಮತ್ತು ಕೋರಿಕೆಗಳನ್ನು ಕ್ರೂಢೀಕರಿಸಿ ಜೇಷ್ಠಾತೆಯನುಸಾರ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಸೇನೌವ 2013, ದಿನಾಂಕ:07.06.2013 ರಲ್ಲಿರುವ ಮಾರ್ಗಸೂಚಿಗಳಂತೆ ಗ್ರೂಪ್-ಡಿ ವೃಂದಗಳ ವರ್ಗಾವಣೆ ಜೇಷ್ಠಾತ ಪಟ್ಟಿಯನ್ನು ತಯಾರಿಸಿ ಹಾಗೂ ಅದರಲ್ಲಿ ಒಂದು ಜೇಷ್ಠಾತ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ. 6 ನ್ನು ಮೀರದಂತೆ ದಿನಾಂಕ:04.06.2022 ರಂದು ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿಯ ಅಧಿಕೃತ ಜಾಲಾತಾಣದಲ್ಲಿ ಪ್ರಕಟಿಸುವುದು. ಸದರಿ ಜೇಷ್ಠಾತ ಪಟ್ಟಿಯ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ:08.06.2022 ರವರೆಗೆ ಅವಕಾಶ ನೀಡುವುದು. ಆಕ್ಷೇಪಣೆಗಳನ್ನು ಇತ್ಯಾರ್ಥಪಡಿಸಿ ಅಂತಿಮ ಜೇಷ್ಠಾತ ಪಟ್ಟಿಯನ್ನು ದಿನಾಂಕ:10.06.2022ರಲ್ಲಿ ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿಯ ಅಧಿಕೃತ ಜಾಲಾತಾಣದಲ್ಲಿ ಪ್ರಕಟಿಸುವುದು.